# ಎಐ ಬಳಕೆಯಿಂದ ಮಾನವ ಸಂಬಂಧಕ್ಕೆ ಧಕ್ಕೆ

## ಎನ್‌ಐಟಿಕೆ ಘಟಿಕೋತ್ಸವದಲ್ಲಿ ಐಐಎಸ್‌ಸಿ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್ ಆತಂಕ

**ವಿಕ ಸುದ್ದಿಲೋಕ** ಸುರತ್ಕಲ್

''ಕೃತಕ ಬುದ್ಧಿಮತ್ತೆ (ಎಐ) ಬಳಕೆ ಇತ್ತೀಚೆಗೆ ಭಾರಿ ಸುದ್ದಿಯಲ್ಲಿದ್ದು, ಎಲ್ಲ ಕ್ಷೇತ್ರಗಳಲ್ಲಿ ಎಐ ಬಳಕೆ ಹೆಚ್ಚಾಗುತ್ತಿದೆ. ಎಐ ಜತೆಗೆ ನಮ್ಮ ಸ್ಪರ್ಧೆ ಬೇಡ, ಅದನ್ನು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪೂರಕ ಟೂಲ್ ಆಗಿ ಬಳಸಬೇಕಾಗಿದೆ. ಭವಿಷ್ಯದಲ್ಲಿ ಎಐನಿಂದ ದೊಡ್ಡ ಪರಿಣಾಮಗಳಾಗಲಿವೆ. ನಾವು ಕಣ್ಣಾರೆ ನೋಡಿರುವುದನ್ನು ಮಾತ್ರ ನಂಬುತ್ತಿದ್ದೇವೆ. ಹಾಗಾಗಿ ಎಐ ಸಾಮಾಜಿಕ ಮಾಧ್ಯಮ ಬಳಕೆಯಿಂದ ಮಾನವ ಸಂಬಂಧ ಹಾಳಾಗುವ ಆತಂಕ ಇದೆ,'' ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಹೇಳಿದರು.

ಸುರತ್ಕಲ್ ಎನ್‌ಐಟಿಕೆಯಲ್ಲಿ ಶನಿವಾರ ನಡೆದ 22ನೇ ಘಟಿಕೋತ್ಸವದಲ್ಲಿ ಅವರು ಘಟಿಕೋತ್ಸವ ಭಾಷಣ ಮಾಡಿದರು.

ಎಐನಿಂದ ಅಡ್ಡ ಪರಿಣಾಮವಾಗುವ ಭೀತಿ ಇದೆ. ನಮಗಿಂತ ಬೇಗ ಕೆಲಸ ಮಾಡುವುದರಿಂದ ಕೆಲಸ ಕಡಿಮೆಯಾಗುವ ಆತಂಕವೂ ಇದೆ. ಎಐ ವೈದ್ಯರ ಸೇವೆ ನೀಡುವ ಮಟ್ಟಕ್ಕೂ ಸಂಶೋಧನೆಯಾಗಿದೆ. ತಂತ್ರಜ್ಞಾನ ಸಕಾರಾತ್ಮಕವಾಗಿ ಬಳಸಲು ಸಿದ್ಧರಾಗೋಣ,'' ಎಂದು ಸಲಹೆ ನೀಡಿದರು.

ಸಿಕಂದರಾಬಾದ್‌ನ ಕಿಮ್ಸ್ ಫೌಂಡೇಶನ್ ಮತ್ತು ರಿಸರ್ಚ್ ಸೆಂಟರ್‌ನ ಅಧ್ಯಕ್ಷ ಡಾ.ಭುಜಂಗ ರಾವ್ ಮಾತನಾಡಿ, ''ಎಂಜಿನಿಯರ್‌ಗಳು ಸಮಾಜ ಮರೆಯದಿರಿ. ಸಮಾಜದ ಮೇಲೆ ಅವರು ಕಣ್ಣಿಡಬೇಕು. ಸಾಮಾಜಿಕ ಚಿಂತನೆ ಅಳವಡಿಸಿಕೊಳ್ಳಬೇಕು. ಸಂಶೋಧನೆ ನಡೆಸಿ ಜನರ ಸಮಸ್ಯೆ ಪರಿಹರಿಸಲು ಆದ್ಯತೆ ನೀಡಬೇಕು,'' ಎಂದರು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಮಾತನಾಡಿ, ''ಎನ್‌ಐಆರ್‌ಎಫ್ -2024 ಪ್ರಕಾರ ಎನ್‌ಐಟಿಕೆ ದೇಶದ ಟಾಪ್ 20 ಎಂಜಿನಿಯರಿಂಗ್ ಕಾಲೇಜುಗಳ ಪಟ್ಟಿಯಲ್ಲಿದೆ. ಎನ್‌ಐಟಿಕೆಯಲ್ಲಿ 14 ವಿಭಾಗಗಳಲ್ಲಿ 45ಕ್ಕೂ ಹೆಚ್ಚು ಅಧ್ಯಯನ ವಿಭಾಗಗಳಿವೆ. ಒಟ್ಟು ಸುಮಾರು 7000 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು ಈ ಪೈಕಿ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗುತ್ತಿದ್ದು ಶೇ.25ರಷ್ಟಿದೆ. ಎನ್‌ಐಟಿಕೆಯ ಶೇ.93ರಷ್ಟು ಯುಜಿ ವಿದ್ಯಾರ್ಥಿಗಳು, ಶೇ.81ರಷ್ಟು ಪಿಜಿ ವಿದ್ಯಾರ್ಥಿಗಳು ಕ್ಯಾಂಪಸ್ ಪ್ಲೇಸ್‌ಮೆಂಟ್ ಮೂಲಕ ವರ್ಷಕ್ಕೆ ಸರಾಸರಿ 16 ಲಕ್ಷಕ್ಕೂ ಹೆಚ್ಚು ವೇತನದ ಉದ್ಯೋಗ ಪಡೆಯುತ್ತಿದ್ದಾರೆ,'' ಎಂದರು.

ಎನ್‌ಐಟಿಕೆ ಉಪ ನಿರ್ದೇಶಕ ಸುಭಾಸ್ ಸಿ.ಯರಗಲ್, ರಿಜಿಸ್ಟ್ರಾರ್ ಡಾ.ಕೆ. ರವೀಂದ್ರನಾಥ್, ನಾನಾ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು. 139 ಮಂದಿಗೆ ಪಿಎಚ್‌ಡಿ ಪದವಿ, 900 ಮಂದಿಗೆ ಪಿಜಿ ಪದವಿ, 40 ಮಂದಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.



ಎನ್‌ಐಟಿಕೆ ಘಟಿಕೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.



''ತನಗೆ ಇದು ಅನಿರೀಕ್ಷಿತವಾಗಿತ್ತು, ತಾನು ಎನ್‌ಐಟಿಕೆ ಚೇರ್‌ಮನ್ ಚಿನ್ನದ ಪದಕ, ಸಂಸ್ಥೆಯ ಚಿನ್ನದ ಪದಕ, ವಿಭಾಗದ ಚಿನ್ನದ ಪದಕ ಸೇರಿ ಒಟ್ಟು 4 ಚಿನ್ನದ ಪದಕ ಪಡೆದಿದ್ದೇನೆ. 2022ರಿಂದ 24 ವರೆಗೆ ಎನ್‌ಐಟಿಕೆಯಲ್ಲಿ ಥರ್ಮಲ್ ಎಂಜಿನಿಯರಿಂಗ್ ಅಧ್ಯಯನ ಪೂರೈಸಿದೆ. ಸದ್ಯ ಬೆಂಗಳೂರಿನಲ್ಲಿ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಉತ್ತಮ ಉದ್ಯೋಗ ಪಡೆದಿದ್ದೇನೆ. ಬಾಲ್ಯದಿಂದಲೇ ಪ್ರತಿಭಾವಂತನಾಗಿದ್ದೆ. ಮುಂದೆ ಅಧ್ಯಯನ ಮಾಡುವ ಉದ್ದೇಶವಿಲ್ಲ, ಉತ್ತಮ ಭವಿಷ್ಯ ಅರಸುವ ವಿದ್ಯಾರ್ಥಿಗಳಿಗೆ ಎನ್‌ಐಟಿಕೆ ಉತ್ತಮ ಅವಕಾಶ ನೀಡುತ್ತಿದೆ.

**-ಪ್ರೇರಿತ್ ಶರ್ಮಾ**, ಥರ್ಮಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ

Vijaya Karnataka, Date:24/11/24, p, no - 04